ಸೆಲೆಬ್ರಿಟಿ

■ ಹನಿ

# ಪೆಟ್ರಾಳ ಮದುವೆ



ಪೆಟ್ರಾ ಎಕ್ಲೆಸ್ಟನ್‌ಳ ಮದುವೆ ಮುಗಿದು ವಾರಗಳು ಉರುಳಿದರೂ, ಇನ್ನೂ ಮದುವೆಯ ಕುರಿತ ಚರ್ಚೆ ನಿಂತಿಲ್ಲ. ಈ ಲಂಡನ್ ಸಂಜಾತೆ ಸದ್ಯಕ್ಕೆ ಜಗತ್ತಿನ ಅತ್ಯಂತ ಜನಪ್ರಿಯ ಮಾಡೆಲ್ ಮತ್ತು ಡ್ರೆಸ್ ಡಿಸೈನರ್. ಲಂಡನ್ನಿನಲ್ಲೇ ಆಗಲಿ, ಹಾಲಿವುಡ್‌ನಲ್ಲೇ ಆಗಲಿ, ಯಾವ ಪಾರ್ಟಿ ನಡೆದರೂ ಈಕೆ ಆಗಮಿಸುವುದು ಪ್ರತಿಷ್ಠೆಯ ಸಂಗತಿ. ಅದಕ್ಕೆ ಈಕೆಯ ವೃತ್ತಿನೈಪುಣ್ಯತೆ ಕಾರಣವಲ್ಲ– ಅಗಾಧ ಶ್ರೀಮಂತಿಕೆ ಕಾರಣ! ಈಕೆ ಜಗತ್ತಿನ 'ಅತ್ಯಂತ ಶ್ರೀಮಂತ ವಧು' ಎಂದು ಈಗಾಗಲೇ ಸಾಬೀತಾಗಿದೆ.

ಕಳೆದ ತಿಂಗಳ ಕೊನೆಯಲ್ಲಿ ನಡೆದ ಈಕೆಯ ಮದುವೆಗೆ ಆದ ಒಟ್ಟು ಖರ್ಚು 50 ಲಕ್ಷ ಡಾಲರ್ ಅಂತೆ! ಮದುವೆ ದಿನ ಧರಿಸಿದ ಡ್ರೆಸ್‌ಗೆ 80,000 ಪೌಂಡ್ ನೀಡಿದಳಂತೆ! 80 ಸಾವಿರ ಪೌಂಡ್ ಬೆಲೆಯ (ಸುಮಾರು 59 ಲಕ್ಷ ರೂಪಾಯಿ) ಡೈಮಂಡ್ ಕಿವಿಯೋಲೆ, ಚಿನ್ನದ ರೋಲೆಕ್ಸ್ ವಾಚ್ ಧರಿಸಿ ಸದಾ ಓಡಾಡುವ ಈಕೆಯ ಮದುವೆಗೆ ರಾಜಕುಮಾರಿಯರಿಂದ ಹಿಡಿದು ಅಗ್ರಗಣ್ಯ ತಾರೆಯರೆಲ್ಲ ಬಂದಿದ್ದರು. ಜುಲೈನಲ್ಲಿ ನಡೆದ ಮದುವೆ ನಿಶ್ಚಿತಾರ್ಥಕ್ಕೆ ಖ್ಯಾತ ಗಾಯಕಿ ರಿಹಾನಾ ಬಂದು ಹಾಡಿದ್ದಕ್ಕೆ ಈಕೆ 1.82 ಕೋಟಿ ರೂಪಾಯಿಯಷ್ಟು ಸಂಭಾವನೆ ನೀಡಿದ್ದಳಂತೆ!

ಮದುವೆಗೆ ಮುನ್ನ ಪೆಟ್ರಾ ಲಾಸ್ ಏಂಜಲೀಸ್‌ನ ಹೋಂಬಿ ಹಿಲ್ಸ್‌ನಲ್ಲಿ ದೊಡ್ಡದೊಂದು ಮನೆ ಖರೀದಿಸಿದ್ದಾಳೆ. ಟೀವಿ ನಿರ್ಮಾಪಕ ಆರೋನ್ ಸ್ಪೆಲಿಂಗ್‌ನಿಂದ ಖರೀದಿಸಿದ ಈ ಬಂಗಲೆಯ ಒಳವಿಸ್ತೀರ್ಣ 57,000 ಚದರ ಅಡಿ! ಮನೆಗೆ ಈಕೆ ಪಾವತಿಸಿದ್ದು 85 ದಶಲಕ್ಷ ಡಾಲರ್. ಲಾಸ್‌ಏಂಜಲೀಸ್ ಪ್ರಾಂತ್ಯದಲ್ಲೇ ಅತೀ ದೊಡ್ಡ ಮನೆ ಇದಂತೆ. ಹಾಗೆಂದು ಈಕೆ ಇಲ್ಲಿ ಉಳಿದುಕೊಳ್ಳುವುದಿಲ್ಲವಂತೆ. 'ವರ್ಷಕ್ಕೊಮ್ಮೆಯೋ, ಎರಡು ಸಲವೋ ಬಂದು ಹೋಗಬೇಕು' ಎಂದಿದ್ದಾಳೆ! ಲಂಡನ್ನಿನ ಚೆಲ್ಸೀಯಲ್ಲಿ ಈಕೆಯ ಮೊದಲ ಮನೆ ಖರೀದಿಸಿದ್ದು 56 ದಶಲಕ್ಷ ಪೌಂಡ್‌ಗೆ! 'ಇಷ್ಟೊಂದು ಶ್ರೀಮಂತಿಕೆ ಎಲ್ಲಿಂದ ಬಂತು?' ಎಂದು ಕೇಳುವಂತಿಲ್ಲ. ಈಕೆಯ ಅಮ್ಮ ಖ್ಯಾತ ಮಾಡೆಲ್ ಸ್ಲಾವಿಕಾ ಮತ್ತು ತಂದೆ ಫಾರ್ಮುಲಾ ಒನ್ ಕಂಪೆನಿಯ ಒಡೆಯ ಬರ್ನಿ ಇಬ್ಬರೂ ಬಿಲಿಯಾಧೀಶರು. ಈಕೆಯ ಮದುವೆಯಾದ ಉದ್ಯಮಿ ಜೇಮ್ಸ್ ಸ್ಟಂಟ್ ಕೂಡಾ ಬಿಲಿಯಾಧೀಶನೇ!



# ಯುವರಾಜನ ಗಾಸಿಪ್

ಗಾಯದ ನೆಪದಲ್ಲಿ ಇಂಗ್ಲೆಂಡ್ ಕ್ರಿಕೆಟ್ ಪ್ರವಾಸದಿಂದ ಹೊರಬಿದ್ದಿರುವ ಯುವರಾಜ್ ಸಿಂಗ್ ಭಂಡಾಲ್, ಈಗ ಒಂದೇ ಸಮನೆ ಬಾಲಿವುಡ್‌ನಲ್ಲಿ ಓಡಾಡುತ್ತಿದ್ದಾನೆ. ಸದ್ಯಕ್ಕೆ ಭಾರತದ 'ಮೋಸ್ಟ್ ವಾಂಟೆಡ್ ಬ್ಯಾಚುಲರ್' ಎಂದು ಹೆಸರಾಗಿರುವ ಯುವಿ, ಮುಂಬೈಯಲ್ಲಿ ಸಿನಿಮಾ ಹುಡುಗಿಯರ ಜತೆ ಸುತ್ತುವುದರಲ್ಲಿ ಹೊಸ ದಾಖಲೆ ಬರೆಯುವ ಎಲ್ಲ ಸಾಧ್ಯತೆಗಳೂ ಇವೆ! ಸದ್ಯಕ್ಕೆ ಈತನ ಸುತ್ತಾಟ ನಡೆದಿರುವುದು ಸಲ್ಮಾನ್ ಖಾನ್‌ನ ಕೊನೇ ತಂಗಿ ಅರ್ಪಿತಾ ಖಾನ್ ಜತೆಗೆ. ಇವರಿಬ್ಬರೂ ದೆಹಲಿಯ ಪಂಚತಾರಾ ಹೋಟೆಲೊಂದರ ಹೊಸ ಕ್ಲಬ್‌ನಲ್ಲಿ ಮಧ್ಯರಾತ್ರಿಯವರೆಗೂ ಲಲ್ಲೆ ಹೊಡೆಯುತ್ತಿದ್ದುದು ಇದೀಗ ಹೊಸ ಸುದ್ದಿ. ಇಬ್ಬರ ಮಧ್ಯೆ ತೀರಾ ನಿಕಟ ಗೆಳೆತನ ಇದೆ ಎನ್ನುವುದು ಬಲ್ಲವರ ಮಾತು!

ಬಾಲಿವುಡ್ ನಟಿಯರ ಜತೆಗೆ ಯುವರಾಜನ ಹೆಸರು ಜೋಡಣೆ ಆಗುತ್ತಿರುವುದು ಇದೇ ಮೊದಲಲ್ಲ. ಕಿಮ್ ಶರ್ಮಾ ಜತೆಗೆ ಯುವರಾಜನ ಗೆಳೆತನ ಈಗಲೂ ಇದೆ. ಅದಕ್ಕೂ ಮುನ್ನ ಬಿಪಾಶಾ ಬಸು ಜತೆ ಓಡಾಡಿ ಸುದ್ದಿ ಮಾಡಿದ್ದ. ದೀಪಿಕಾ ಪಡುಕೋಣೆ ಕೆಲವು ತಿಂಗಳ ಹಿಂದೆ ಯುವರಾಜನನ್ನು ಬಹಿರಂಗವಾಗಿ ಹಾಡಿ ಹೊಗಳಿದ್ದಳು. ಸಿಮಿ ಗರೆವಾಲ್ ಷೋನಲ್ಲಿ ಸ್ವತಃ ಕಾಣಿಸಿಕೊಂಡ ಯುವರಾಜ್, 'ಕ್ರಿಕೆಟ್‌ನಿಂದ ನಿವೃತ್ತಿ ಪಡೆದರೆ ಸಿನಿಮಾದಲ್ಲಿ ಹೀರೊ ಆಗಿ ನಟಿಸುತ್ತೇನೆ' ಎಂದಿದ್ದಾನೆ!

ಅಂದ ಹಾಗೆ, ಯುವರಾಜನ ಮೆಚ್ಚಿನ ನಟ ಕಾಜೋಲ್ ಅಂತೆ. ಯುವಕನಾಗಿದ್ದಾಗ ಈತ ಚಿತ್ರನಟಿ ಕಾಜೋಲ್ ಆಟೊಗ್ರಾಫ್‌ಗಾಗಿ ಆಕೆಯ ಹಿಂದೆಯೇ ಅಲೆದಾಡಿದ್ದನಂತೆ! ಕ್ರಿಕೆಟ್‌ಗೆ ಬರುವುದಕ್ಕೆ ಮುನ್ನವೇ ಯುವರಾಜ್ ಎರಡು ಪಂಜಾಬಿ ಚಿತ್ರಗಳಲ್ಲಿ ನಟಿಸಿದ್ದನಂತೆ! ಸದ್ಯಕ್ಕೆ ಚಂಡೀಗಢದಿಂದ ಮುಂಬೈಗೆ ಮನೆ ಶಿಫ್ಟ್ ಮಾಡಿರುವ ಯುವರಾಜ್, ಬಾಲಿವುಡ್ ಅಳಿಯನಾಗುವ ಎಲ್ಲ ಸಾಧ್ಯತೆಗಳೂ ಕಂಡುಬರುತ್ತಿವೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65